ನಂದಿಗಿರಿಧಾಮ

೧. ನಂದಿಗಿರಿಧಾಮದಲ್ಲಿ ಮಾನವ ವಸತಿ ಎಂದಿನಿಂದ ಆರಂಭವಾಯಿತೆಂದು ಮಾಹಿತಿಯಿಲ್ಲ. ಸಾವಿರಾರು ವರ್ಷಗಳ ಹಿಂದೆ ಕೂಷ್ಮಾಂಡ ಋಷಿಯು ಇಲ್ಲಿ ತಪಸ್ಸು ಮಾಡಿದ ಕಾರಣ ಇದನ್ನು 'ಕೂಷ್ಮಾಂಡಗಿರಿ' ಎಂದು ಕರೆಯಲಾಗುತ್ತಿತ್ತು ಎನ್ನಲಾಗಿದೆ. ಚೋಳರ ಅವಧಿಯಲ್ಲಿ ಇದನ್ನು 'ಆನಂದಗಿರಿ' ಎಂದು ಕರೆಯುತ್ತಿದ್ದರೆಂದು, ಶಿವನ ಆಶೀರ್ವಾದದಿಂದ ಚೋಳರು ಶ್ರೀÃ ಯೋಗನಂದೀಶ್ವರ ದೇವಸ್ಥಾನವನ್ನು ನಿರ್ಮಿಸಿದ ನಂತರ ಇದು 'ನಂದಿಗಿರಿ' ಎಂದು ಕರೆಯಲಾಗುತ್ತಿದೆಯೆಂದು ಪ್ರಚಲಿತದಲ್ಲಿದೆ. ಸದರಿ ದೇವಸ್ಥಾನವು ಮುಜರಾಯಿ ಇಲಾಖೆಯ ಸ್ವಾಮ್ಯದಲ್ಲಿ ನಿರ್ವಹಿಸಲಾಗುತ್ತಿದೆ.

೨. ಟಿಪ್ಪು ಸುಲ್ತಾನ್ – ಗಂಗರ ಕಾಲದಲ್ಲಿ ಚಿಕ್ಕಬಳ್ಳಾಪುರದ ಪಾಳೆಗಾರರು ರಕ್ಷಣೆಗಾಗಿ ಕಟ್ಟಿದ ಕೋಟೆಯನ್ನು ಟಿಪ್ಪು ಸುಲ್ತಾನ್ ೧೭೨೬-೧೭೯೫ ಅವಧಿಯಲ್ಲಿ ಇನ್ನಷ್ಟೂ ಭದ್ರಪಡಿಸಿ ಒಂದು ವಿಶ್ರಾಂತಿ ಬಂಗಲೆÉಯನ್ನು ನಿರ್ಮಿಸಿದರು. ಇವರ ಕಾಲದಲ್ಲಿ ತಪ್ಪಿಸ್ತರು/ಖೈದಿಗಳನ್ನು ಶಿಕ್ಷಿಸಲು ನಿರ್ದಾಕ್ಷಣ್ಯದಿಂದ ತಳ್ಳುತಿದ್ದ ಘೋರ ಕಂದರವನ್ನು 'ಟಿಪ್ಪು ಡ್ರಾಪ್' ಎಂದು ಕರೆಯಲಾಯಿತು. ಟಿಪ್ಪು ಸುಲ್ತಾನ್ ಬೇಸಿಗೆ ಅರಮನೆಯು ಹಾಲಿ ಪುರಾತತ್ವ ಇಲಾಖೆಯ ಅಧೀನದಲ್ಲಿರುತ್ತದೆ.

೩. ಮೇಜರ್ ಜನರಲ್ ಸರ್ ಲಾರ್ಡ್ ಮಾರ್ಕ್ ಕಬ್ಬನ್-೧೮೩೪ರಲ್ಲಿ ನೆಹರು ನಿಲಯ(ಕಬ್ಬನ್ ಅತಿಥಿಗೃಹ) ವನ್ನು ಕಟ್ಟಿಸಿರುತ್ತಾರೆÉ. ಸದರಿ ಕಟ್ಟಡವು ಚೌಕಾಕಾರದಲ್ಲಿದ್ದು, ನಾಲ್ಕು ಕಡೆ ಗಾಳಿ ಬೆಳಕು ಸಮಪಾಲಿನಲ್ಲಿ ಚಲಿಸುತ್ತಿರುತ್ತದೆ. ೧೯೮೬ರಲ್ಲಿ ಶ್ರೀÃ ರಾಜೀವ ಗಾಂಧಿ ಪ್ರಧಾನಿ ಮಂತ್ರಿಯಾಗಿದ್ದ ಅವಧಿಯಲ್ಲಿ ಸಾರ್ಕ್ ಶೃಂಗ ಸಭೆಯನ್ನು ಇಲ್ಲಿ ನಡೆಸಲಾಗಿದ್ದು, ಗಿರಿಧಾಮವನ್ನು ವಿಶ್ವಮಟ್ಟದ ಪಾರಂಪರಿಕ ಮತ್ತು ಆರೋಗ್ಯಧಾಮವೆಂದು ಗುರ್ತಿಸಿರುವುದು ಸಹ ದಾಖಲೆಗಳಲ್ಲಿ ನಮೂದಿಸಿದೆ.

೪. ಗಾಂಧಿ ನಿಲಯ - ೧೮೫೨ರಲ್ಲಿ ಗಾಂಧಿ ನಿಲಯ (ಓಕ್ಲೆÃನ್ ಅತಿಥಿಗೃಹ) ನಿರ್ಮಿಸಿರುತ್ತಾರೆ. ಈ ವಸತಿ ಗೃಹದಲ್ಲಿ ಮಹಾತ್ಮ ಗಾಂಧಿಯವರು ೧೯೨೭ ಹಾಗೂ ೧೯೩೬ ರಲ್ಲಿ ೬೬ ದಿನಗಳ ಕಾಲ ವಿಶ್ರಾಂತಿ ಪಡೆದಿರುತ್ತಾರೆ. ಹಾಲಿ ಕೆ.ಎಸ್.ಟಿ.ಡಿ.ಸಿ. ವತಿಯಿಂದ ಈ ವಸತಿ ಗೃಹವನ್ನು ನಿರ್ವಹಿಸಲಾಗುತ್ತಿದೆ.

೫. ಗಿರಿಧಾಮವು ೧೯೧೪ನೇ ಇಸವಿಯಿಂದ ತೋಟಗಾರಿಕೆ ಇಲಾಖೆ ವಶದಲ್ಲಿದ್ದು ಗಿರಿಧಾಮದ ಉದ್ಯಾನವನವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಗಿರಿಧಾಮದ ಭೂ ಪ್ರದೇಶವು ಸುಮಾರು ೯೦ ಎಕರೆವಿದ್ದು, ಶೇ.೭೫ ಭಾಗ ಇಳಿಜಾರು ಪ್ರದೇಶ ಮತ್ತು ಕಲ್ಲು ಬಂಡೆಯಿಂದ ಕೂಡಿದ ಪ್ರದೇಶವಾಗಿರುತ್ತದೆ. ಇನ್ನುಳಿದ ಶೇ. ೨೫ ಭಾಗದಲ್ಲಿ ಅತಿಥಿ ಗೃಹಗಳು, ದೇವಸ್ಥಾನ, ಹೋಟೆಲ್‌ನ ಕಟ್ಟಡಗಳು ಮತ್ತು ಉದ್ಯಾನವನವನ್ನಾಗಿ ಪ್ರಸ್ತುತ ನಿರ್ವಹಿಸಲಾಗುತ್ತಿದೆ.

ಉದ್ಯಾನವನದ ವೈಶಿಷ್ಟ್ಯಗಳು

ನಂದಿಗಿರಿಧಾಮವು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಭೌಗೊಳಿಕವಾಗಿ ಆಶ್ರಯ ಪಡೆದಿದ್ದು ರಾಜ್ಯದ ರಾಜಧಾನಿಯಾದ ಬೆಂಗಳೂರಿಗೆ ಅತ್ಯಂತ ಸನಿಹದಲ್ಲಿರುವ ವಿಶ್ವ ಪ್ರಸಿದ್ಧ ಪ್ರವಾಸಿ ತಾಣವಾಗಿರುತ್ತದೆ. ಕರ್ನಾಟಕ ರಾಜ್ಯದ ಹೆಮ್ಮೆಯ ಪ್ರತೀಕವಾದ ಗಿರಿಧಾಮವು ಒಂದು ಅಂತರರಾಷ್ಟ್ರçÃಯ ಸ್ಮಾರಕವಾಗಿರುತ್ತದೆ. ನಂದಿಗಿರಿಧಾಮದ ನೈಸರ್ಗಿಕ ಸೌಂದರ್ಯ, ಆಹ್ಲಾದಕರವಾದ ಹವಾಗುಣ, ಮನಮೋಹಕ ಪ್ರಕೃತಿಯ ರಮಣೀಯ ದೃಶ್ಯಾವಳಿ ಮತ್ತು

ಪ್ರಶಾಂತತೆಯು ದೇಶದ ಗಣ್ಯಾತಿಗಣ್ಯ ಪ್ರವಾಸಿಗರನ್ನಲ್ಲದೇ ವಿದೇಶಿ ರಾಷ್ಟ್ರಾ**ç**ಧ್ಯಕ್ಷರು ಹಾಗೂ ಪ್ರಧಾನಿಗಳನ್ನು ಆಕರ್ಷಿಸುತ್ತಿರುವ ಪ್ರವಾಸಿ ತಾಣವಾಗಿದೆ. ಗಿರಿಧಾಮ ಸಮುದ್ರ ಮಟ್ಟದಿಂದ ಸುಮಾರು ೪೮೫೧ ಅಡಿ ಎತ್ತರದಲ್ಲಿದ್ದು, ಏಕಶಿಲೆಯಿಂದ ರೂಪಗೊಂಡಿರುತ್ತದೆ. ಗಿರಿಧಾಮದ ಸುಂದರ ಮನಮೋಹಕ ಹವಾಗುಣವನ್ನು ಸವಿಯಲು ಪ್ರತಿದಿನ ಸಾವಿರಾರು ಸಂಖ್ಯೆಯ ಪ್ರವಾಸಿಗರು ಆಗಮಿಸುತ್ತಾರೆ.

ನಂದಿಗಿರಿಧಾಮವು ಹಲವು ಪ್ರೆÃಕ್ಷಣೀಯ ಸ್ಥಳವನ್ನು ಒಳಗೊಂಡಿದ್ದು, ಅವುಗಳಿಂದರೆ

ಚಿ) ಯೋಗನಂದೀಶ್ವರ ದೇವಸ್ಥಾನ

b) ಸರ್ ಮಾರ್ಕ್ ಕಬ್ಬನ್ ಅತಿಥಿ ಗೃಹ (ನೆಹರು ನಿಲಯ)

ಛಿ) ಓಕ್ಲೆನ್ ಅತಿಥಿ ಗೃಹ.(ಗಾಂಧಿ ನಿಲಯ)

ಜ) ನೆಲ್ಲಿ ಕಾಯಿ ಬಸವಣ್ಣ ದೇವಸ್ಥಾನ.

e) ಪಾಲರ್ ನದಿ ಮೂಲ.

ಜಿ) ಆರ್ಕಾವತಿ ನಿದಿ ಮೂಲ.

g) ಟಿಪ್ಪು ಡ್ರಾಪ್.

h) ಅಮೃತ ಸರೋವರ.

i) ಅಂತರಗಂಗೆ

ರಿ) ಪಾತಾಳಗಂಗೆ

ಞ) ಟಿಪ್ಪುವಿನ ಬೇಸಿಗೆ ಅರಮನೆ.

ಟ) ಗವಿ ವೀರಭದ್ರ ಸ್ವಾಮಿ ದೇವಾಲಯ, ಆಂಜನೇಯಸ್ವಾಮಿ ದೇವಾಲಯ.

m) ಬ್ರಹ್ಮಾಶ್ರಮ ಗುಹೆ

ಟಿ) ಗಿರಿಧಾಮದ ಗುಪ್ತದ್ವಾರ.

o) ಕುದರೆ ಮೆಟ್ಟಿಲು

ಠಿ) ಉದ್ಯಾನವನಗಳು, ಮಕ್ಕಳ ಆಟದ ಮೈದಾನ, ವಿವಿಧ ಜಾತಿಯ ಮರಗಳು, ಅಲಂಕಾರಿಕ ಗಿಡಗಳು

ಅತಿಥಿ ಗೃಹಗಳ ವಿವರ

೧. ನಂದಿಗಿರಿಧಾಮದಲ್ಲಿ ನೆಹರು ನಿಲಯದ ನಾಲ್ಕು ವಿ.ವಿ.ಐ.ಪಿ. ಅತಿಥಿಗೃಹಗಳು, ಆರು ವಿ.ಐ.ಪಿ. ಕುಟೀರಗಳು ಹಾಗೂ ೧೪ ಸಾಮಾನ್ಯ ಕೊಠಡಿಗಳನ್ನು ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದೆ.

ಆನ್ ಲೈನ್ ಕಾಯ್ದಿರಿಸುವಿಕೆ www.nandihillsreservations.inನೆಹರು ನಿಲಯದ ದರಗಳು

ಸೂಟ್ ೨೨೪೦-೦೦, ಕಾಟೇಜು ರೂ. ೧೬೪೦-೦೦, ಡಿಲಕ್ಸ್ ಕೊಠಡಿ ರೂ. ೧೧೨೦-೦೦, ಡೈನಿಂಗ್ ಹಾಲ್ ರೂ. ೧೧೨೦-೦೦, ಕಾನ್ಫರೆನ್ಸ್ ಹಾಲ್ ರೂ. ೨೮೦೦-೦೦.

ಮಧ್ಯಾಹ್ನ ೧೨.೦೦ ಗಂಟೆಯಿಂದ ಮರುದಿನ ಮಧ್ಯಾಹ್ನ ೧೨-೦೦ ಗಂಟೆಯವರೆಗೆ

೨. ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಹೋಟೆಲ್ ಮಯೂರ ಪೈನ್ ಟಾಪ್‌ನಲ್ಲಿರುವ ನಾಲ್ಕು ಅತಿಥಿಗೃಹಗಳು, ಹಾಗೂ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ೧೨ ಅತಿಥಿಗೃಹಗಳು ಕೆ.ಎಸ್.ಟಿ.ಡಿ.ಸಿ. ವತಿಯಿಂದ ನಿರ್ವಹಿಸಲಾಗುತ್ತಿದೆ.
ಆನ್ ಲೈನ್ ಕಾಯ್ದಿರಿಸುವಿಕೆ www.kstdc.in
ದರಗಳು : ರೂ. ೨೭೦೦ ರಿಂದ ರೂ. ೫೨೦೦ ರವರೆಗೆ ಕೊಠಡಿಗಳ ಲಭ್ಯತೆಯ ಆಧಾರದಲ್ಲಿ ದರನಿಗದಿಯಾಗುತ್ತದೆ.

೩. ಗಾಂಧಿನಿಲಯದಲ್ಲಿ ನಾಲ್ಕು ವಿ.ವಿ.ಐ.ಪಿ. ಅತಿಥಿಗೃಗಳಿದ್ದು ಇವು ಗಣ್ಯ ವ್ಯಕ್ತಿಗಳಿಗೆ ಮೀಸಲಾಗಿದ್ದು, ಇವುಗಳನ್ನು ಸರ್ಕಾರದ ಶಿಷ್ಟಾಚಾರ ವಿಭಾಗ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಕಾಯ್ದಿರಿಸಬೇಕಾಗಿದೆ.

೪. ಗಿರಿಧಾಮದಲ್ಲಿ ಬಿಸಾಕಂ ಇಲಾಖೆಯ ಅಧೀನದ ನಾಲ್ಕು ಅತಿಥಿ ಗೃಹಗಳಿದ್ದು, ಬಿಸಾಕಂ ಇಲಾಖೆಯು ನಿರ್ವಹಿಸುತ್ತಿದೆ. ಅವರ ಇಲಾಖೆಯ ಸಿಬ್ಬಂದಿಗೆ ಮಾತ್ರ ನೀಡಲಾಗುವುದು.
೫. ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದಲ್ಲಿ ನಾಲ್ಕು ಕೋಠಡಿಗಳಿದ್ದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರರವರು ನಿರ್ವಹಿಸುತ್ತಿದ್ದಾರೆ.

ಪ್ರವೇಶ ಶುಲ್ಕ/ವಾಹನ ನಿಲುಗಡೆ ಶುಲ್ಕದ ವಿವರಗಳು

ಕ್ರಸಂ	ವಿವರಗಳು	ದರ (ರೂ.ಗಳಲ್ಲಿ)
೧.	ವಯಸ್ಕರು/೧೨ ವರ್ಷ ಮೇಲ್ಪಟ್ಟ ಮಕ್ಕಳು	೨೦-೦೦
೨.	ದ್ವಿಚಕ್ರ ವಾಹನ	೩೦-೦೦
೩.	ದ್ವಿಚಕ್ರ ವಾಹನ + ಒಬ್ಬ ವ್ಯಕ್ತಿ	೫೦-೦೦
೪.	ದ್ವಿಚಕ್ರ ವಾಹನ + ಇಬ್ಬರು ವ್ಯಕ್ತಿಗಳು	೭೦-೦೦
೫.	ನಾಲ್ಕು ಚಕ್ರದ ವಾಹನ ೪+೧ ಸೀಟರ್ ಜನಗಳಿಗೆ ಸೇರಿ (ಪಾರ್ಕಿಂಗ್ ಪ್ರದೇಶ)	೧೨೫-೦೦
೬.	ನಾಲ್ಕು ಚಕ್ರದ ವಾಹನ ೪+೧ ಸೀಟರ್ ಜನಗಳಿಗೆ ಸೇರಿ (ಗಿರಿಧಾಮದ ಮೇಲ್ಭಾಗಕ್ಕೆ)	೧೭೫-೦೦
೭.	ನಾಲ್ಕು ಚಕ್ರದ ವಾಹನ ೫+೧ & ಹೆಚ್ಚು ಸೀಟರ್ ಜನಗಳಿಗೆ ಸೇರಿ (ಪಾರ್ಕಿಂಗ್ ಪ್ರದೇಶ)	೧೫೦-೦೦
೮.	ನಾಲ್ಕು ಚಕ್ರದ ವಾಹನ ೫+೧ & ಹೆಚ್ಚು ಸೀಟರ್ ಜನಗಳಿಗೆ ಸೇರಿ (ಗಿರಿಧಾಮದ ಮೇಲ್ಭಾಗಕ್ಕೆ)	೧೭೫-೦೦
೯.	ಮೂರು ಚಕ್ರದ ವಾಹನ ಜನಗಳಿಗೆ ಸೇರಿ (ಪಾರ್ಕಿಂಗ್ ಪ್ರದೇಶ)	೭೦-೦೦
೧೦.	ಮೂರು ಚಕ್ರದ ವಾಹನ ಜನಗಳಿಗೆ ಸೇರಿ (ಗಿರಿಧಾಮದ ಮೇಲ್ಭಾಗಕ್ಕೆ)	೮೦-೦೦
	ಈ ದರದಲ್ಲಿ ಎಲ್ಲಾ ತೆರಿಗೆಗಳು ಸೇರಿವೆ	